**ಓ.ಎಸ್. ನಂಃ 22/2017**

**ಪಿ.ಡಬ್ಲ್ಯೂಃ 2**

**ದಿನಾಂಕ 25.02.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಃ ಶ್ರೀ ಜಿ.ಎಲ್.ಡಿ ವಕೀಲರಿಂದಃ**

15. ಸಾಕ್ಷಿಗೆ ಈಗ ದಿಃ 27.03.2013 ರ ನೊಂದಾಯಿತ ಕ್ರಯದ ಕರಾರು ಪತ್ರದ ದೃಡಿಕೃತ ನಕಲನ್ನು ತೋರಿಸಿ ಅದರಲ್ಲಿರುವ ತಮ್ಮ ಪೊಟೋವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಡಿ.8 ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಬಳ್ಳೂರು ಗ್ರಾಮದ ಕೃಷ್ಣೇಗೌಡ, ಬಿ.ಕೆ.ದಿಲೀಪಕುಮಾರ ಬಿನ್ ಕೃಷ್ಣೇಗೌಡ ರವರು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಈಗ ದಿನಾಂಕ 28.05.2016 ರ ಕ್ರಯದ ಕರಾರು ಪತ್ರದ ನೊಂದಾಯಿತ ರದ್ದತಿ ಪತ್ರದ ದೃಡಿಕೃತ ನಕಲನ್ನು ತೋರಿಸಿದ್ದು, ಅದರಲ್ಲಿರುವ ತಮ್ಮ ಪೊಟೋವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಡಿ.9 ಎಂದು ಗುರುತಿಸಲಾಯಿತು. ನಿಡಿ.9 ರಡಿಯಲ್ಲಿ ನಿಡಿ.8 ರ ಕ್ರಯದ ಕರಾರು ಪತ್ರವನ್ನು ರದ್ದುಪಡಿಸಿರುತ್ತೇನೆ ಎಂದರೆ ಸಾಕ್ಷಿಯು ನಿಡಿ.8 ರ ಕ್ರಯದ ಕರಾರು ಪತ್ರದ 2 ನೇ ಪಕ್ಷಗಾರರು ನನಗೆ ಹಣ ಮರುಪಾವತಿ ಮಾಡಿದ ಕಾರಣ ನಾನು ನಿಡಿ.9 ರ ರದ್ದತಿ ಪತ್ರವನ್ನು ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಕೃಷ್ಣೇಗೌಡ ಮತ್ತು ಅವರ ಮಗನಾದ ದಿಲೀಪಕುಮಾರವರು ನನಗೆ ಬಡ್ಡಿ ಸಮೇತ ಹಣ ಮರುಪಾವತಿ ಮಾಡಿದ ಕಾರಣ ನಿಡಿ.9 ರ ದಾಖಲೆಯನ್ನು ಮಾಡಿಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ಅವರು ಕೇವಲ ಹಣವನ್ನು ಮರುಪಾವತಿ ಮಾಡಿದ್ದು, ಬಡ್ಡಿಯನ್ನು ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಹಣದ ಲೇವಾದೇವಿ ವ್ಯವಹಾರದ ಸಂಬಂದ ನಿಡಿ.8 ಮತ್ತು 9 ರ ದಾಖಲೆಗಳನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

16. ಸಾಕ್ಷಿಗೆ ಈಗ ದಿನಾಂಕ 18.11.2019 ರ ನೊಂದಾಯಿತ ಕ್ರಯದ ಕರಾರು ಪತ್ರದ ರದ್ದತಿ ಪತ್ರದ ದೃಡಿಕೃತ ನಕಲನ್ನು ತೋರಿಸಿದ್ದು, ಅದರಲ್ಲಿರುವ ತಮ್ಮ ಪೊಟೋವನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಸದರಿ ದಾಖಲೆಯನ್ನು ನಿಡಿ.10 ಎಂದು ಗುರುತಿಸಲಾಯಿತು. ದಿಃ 28.05.2016 ರಂದು ಕೃಷ್ಣೇಗೌಡ ಮತ್ತು ಅವರ ಮಗನಾದ ದಿಲೀಪಕುಮಾರವರಿಂದ ಬರೆಸಿಕೊಂಡ ಕ್ರಯದ ಕರಾರು ಪತ್ರವನ್ನು

ನಾನು ನಿಡಿ.10 ರ ಪ್ರಕಾರ ರದ್ದತಿ ಮಾಡಿರುವುದಾಗಿ ನಿಡಿ.10 ರಲ್ಲಿ ನಮೂದು ಇದೆ ಎಂದರೆ ಸರಿ. ನನಗೆ ಬಡ್ಡಿ ಸಮೇತ ಹಣ ಮರುಪಾವತಿ ಮಾಡಿದ ಕಾರಣ ನಿಡಿ.10 ರ ದಾಖಲೆಯನ್ನು ಮಾಡಿಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ಅವರು ಕೇವಲ ಹಣವನ್ನು ಮರುಪಾವತಿ ಮಾಡಿದ್ದು, ಬಡ್ಡಿಯನ್ನು ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ.

17. ಸಾಕ್ಷಿಗೆ ಈಗ ದಿಃ 02.12.2019 ರ ನೊಂದಾಯಿತ ಕ್ರಯದ ಕರಾರು ಪತ್ರದ ರದ್ದತಿ ಪತ್ರ ಸಂಖ್ಯೆ ಎಂ.ಐ.ಆರ್.1-03846/2019-2020 ರ ದಾಖಲೆಯನ್ನು ತೋರಿಸಿ ಅದರಲ್ಲಿ ವಾದಿ ಸಂಖ್ಯೆ 1(ಬಿ) ರವರಾದ ಗಾಯತ್ರಿ ಕೋಂ ರಮೇಶರವರ ಪೊಟೋ ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸದರಿ ದಾಖಲೆಯಲ್ಲಿ ಇರುವ ಪೊಟೋ ವಾದಿ ಸಂಖ್ಯೆ 1(ಬಿ) ರವರ ಪೊಟೋ ಅಲ್ಲ ಆದರೆ ಹೆಸರು ಮಾತ್ರ ವಾದಿ ಸಂಖ್ಯೆ 1(ಬಿ) ರವರದ್ದಾಗಿರುತ್ತದೆ ಎಂದು ನುಡಿದಿರುತ್ತಾರೆ.

18. ಸಾಕ್ಷಿಗೆ ಈಗ ದಿನಾಂಕ 13.11.2020 ರ ನೊಂದಾಯಿತ ಕ್ರಯದ ಕರಾರು ಪತ್ರದ ದೃಡಿಕೃತ ನಕಲನ್ನು ತೋರಿಸಿದ್ದು, ಅದರಲ್ಲಿರುವ ತಮ್ಮ ಪೊಟೋವನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಸದರಿ ದಾಖಲೆಯನ್ನು ನಿಡಿ.11 ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಬಳ್ಳೂರು ಗ್ರಾಮದ ಸಣ್ಣೇಗೌಡ ಬಿನ್ ಚಿಕ್ಕೇಗೌಡರಿಂದ ಆಸ್ತಿ ಖರೀದಿ ಮಾಡಿರುವುದಾಗಿ ಬರೆದುಕೊಟ್ಟ ದಾಖಲೆ ಎಂದರೆ ಸರಿ. ನೀವು ಹಣ ಲೇವಾದೇವಿ ವ್ಯವಹಾರ ಮಾಡಲು ಸರಕಾರದಿಂದ ಪರವಾನಿಗೆ ಪಡೆದಿರುತ್ತೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾವು ಯಾವುದೇ ಹಣದ ಲೇವಾದೇವಿ ವ್ಯವಹಾರ ಮಾಡುವುದಿಲ್ಲ ಎಂದು ನುಡಿದಿರುತ್ತಾರೆ. ನಾವು ಹಣ ಲೇವಾದೇವಿ ವ್ಯವಹಾರ ಮಾಡುತ್ತೇವೆ ಎಂದು ನಿಡಿ.3 ರಿಂದ 11 ರ ದಾಖಲೆಗಳಿಂದ ತಿಳಿದು ಬರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**